# ವಿಶ್ವನಂದಿನಿ ಲೇಖನಮಾಲೆ – 91

## ಸುಖಪ್ರಸವಕ್ಕಾಗಿ ಮಂತ್ರ

**ಗರ್ಭದಲ್ಲಿರುವ ಮಗು ಮತ್ತು ಗರ್ಭಿಣಿಯ ರಕ್ಷಣೆಗಾಗಿ, ಹಾಗೂ ಸುಖಪ್ರಸವಕ್ಕಾಗಿ ಪಠಿಸಬೇಕಾದ ಶ್ಲೋಕ.**

ಪ್ರಸವದ ನಿಯಾಮಕ ದೇವತೆಗಳಾದ ಶಚೀದೇವಿ, ಇಂದ್ರ

ವಿಷಕ್ರಿಮಿಗಳಿಂದ ಗರ್ಭವನ್ನು ರಕ್ಷಿಸುವ ಪಾರ್ವತೀಪತಿ ಶಂಕರ

ಗರ್ಭಸ್ಥ ಶಿಶುವಿಗೆ ಹೊಕ್ಕಳುನಿಂದಲೇ ಗಾಳಿಯನ್ನು ಪೂರೈಸುವ

ಮತ್ತು ಪ್ರಸವದ ಸಂದರ್ಭದಲ್ಲಿ ಮಗುವನ್ನು ರಕ್ಷಣೆ ಮಾಡುವ ಭಾರತೀ ಮುಖ್ಯಪ್ರಾಣರು

ಇವರೆಲ್ಲರ ಅಂತರ್ಯಾಮಿಯಾಗಿ ಸಮಸ್ತ ಜಗತ್ತನ್ನು ಪೊರೆಯುವ
ಕಾರುಣ್ಯದ ಲಕ್ಷ್ಮೀ ನಾರಾಯಣರನ್ನು ಹೀಗೆ ಪ್ರಾರ್ಥಿಸಬೇಕು.

**ದೇವೇಶೋ ದೇವಭೃದ್ ದೇವಃ**
**ಶಚೀನಾಥೋ ಮಹಾಬಲಃ ।**
**ಇಂದ್ರಸ್ತು ಕೃಪಯಾ ಗರ್ಭಂ**
**ಮಾತರಂ ಚಾಪಿ ರಕ್ಷತು ॥**

**ಮಹಾಬಲಃ** — ಮಹತ್ತರವಾದ ಶಕ್ತಿಯುಳ್ಳ
**ಶಚೀನಾಥಃ** — ಇಂದ್ರ ಶಚೀಪತಿಯಾದ ಇಂದ್ರ
**ದೇವೇಶಃ** — ದೇವತೆಗಳ ಒಡೆಯರಾದ ರುದ್ರದೇವರು
**ದೇವಭೃತ್** — ದೇವತೆಗಳನ್ನು ಪಾಲಿಸುವ ಭರತನಾಮಕ ವಾಯುದೇವರು
**ದೇವಃ** — ಸಮಸ್ತ ಜಗತ್ತಿನ ಕಾರ್ಯವನ್ನೂ ಆಟದಂತೆ ನಿರ್ವಹಿಸುವ ಸ್ವಾಮಿ ಲಕ್ಷ್ಮೀನಾರಾಯಣ
ಇವರೆಲ್ಲರೂ
**ಗರ್ಭಂ** — ಗರ್ಭವನ್ನು, ಗರ್ಭದಲ್ಲಿರುವ ಶಿಶುವನ್ನು
**ಚ** — ಮತ್ತು
**ಮಾತರಂ** — ಗರ್ಭದಲ್ಲಿ ಶಿಶುವನ್ನು ಹೊತ್ತಿರುವ ತಾಯಿಯನ್ನು
**ಕೃಪಯಾ** — ಕರುಣೆಯಿಂದ
**ರಕ್ಷತು** — ರಕ್ಷಿಸಲಿ.

ಈ ಶ್ಲೋಕವನ್ನು ಸ್ತ್ರೀಯರು ಮುಂತಾಗಿ ಎಲ್ಲರೂ ಪಠಿಸಬಹುದು. ಶಚೀಪತಿಯಾದ ಇಂದ್ರ ಸಮಸ್ತದೇವತೆಗಳನ್ನು ರಕ್ಷಿಸುವ ಸ್ವಾಮಿ. ಅವನನ್ನು ರಕ್ಷಿಸುವವರು ಪಾರ್ವತೀಪತಿ ಮಹಾರುದ್ರದೇವರು.

ಅವರನ್ನು ರಕ್ಷಿಸುವವರು ಭಾರತೀಪತಿ ಪ್ರಾಣದೇವರು. ಅವರನ್ನು ರಕ್ಷಿಸುವವವರು ಜಗದೊಡೆಯರಾದ ಲಕ್ಷ್ಮೀನಾರಾಯಣರು. (ಇಷ್ಟೂ ಅರ್ಥವೂ ಮೇಲಿನ ಶ್ಲೋಕದಲ್ಲಿದೆ) ಅವರೆಲ್ಲರೂ ಗರ್ಭದಲ್ಲಿರುವ ಶಿಶುವನ್ನು ಮತ್ತು ಗರ್ಭಿಣಿಯಾದ ಸ್ತ್ರೀಯನ್ನು ರಕ್ಷಿಸಲಿ ಎಂದು ಅನವರತ ಪ್ರಾರ್ಥಿಸುತ್ತಿರಬೇಕು. ಇದರಿಂದ ಸುಖಪ್ರಸವವುಂಟಾಗುತ್ತದೆ.

ಒಂದು ತಾಮ್ರದ ಬಟ್ಟಲಿನಲ್ಲಿ ನೀರು, ಅಥವಾ ಬೆಳ್ಳಿಯ ಬಟ್ಟಲಿನಲ್ಲಿ ಹಾಲನ್ನಿಟ್ಟು ಅದರ ಮೇಲೆ ಬಲಗೈಯನ್ನಿಟ್ಟು ಮೇಲೆ ಹೇಳಿದ ದೇವತೆಗಳನ್ನು ಹಾಗೂ ಗುರುಗಳನ್ನು ಪ್ರಾರ್ಥಿಸುತ್ತಾ 21 ಬಾರಿ ಶ್ಲೋಕವನ್ನು ಪಠಿಸಿ ಗರ್ಭಿಣಿಗೆ ಕುಡಿಯಲು ನೀಡಿ.

**ಎಲ್ಲ ಗರ್ಭಿಣಿಯರಿಗೂ ಇದನ್ನು ಪಠಿಸಲು ನೀಡಿ. ಗರ್ಭಿಣಿ-ಯರು ತಾವೇ ಪಠಿಸಿ ಪ್ರಾರ್ಥಿಸಿದರೆ ಉತ್ತಮ ಫಲ.**

ಗರ್ಭಿಣಿಯರ ಆರೋಗ್ಯ ಚನ್ನಾಗಿರಲಿ,
ಸುಖದಿಂದ ಹಡೆಯುವಂತಾಗಲಿ,
ಸತ್ಸಂತಾನದಿಂದ ನಮ್ಮ ದೇಶ ಶ್ರೀಮಂತವಾಗಲಿ
ಎಂಬ ಹಾರ್ಶೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491